ಅಸಲು ದಾವಾ ನಂ.**87/2018**
ಪಿ.ಡಬ್ಲೂ.**01**

ಸಾಕ್ಷಿಗೆ ದಿನಾಂಕಃ **29.11.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ನಂ.**06** ಮತ್ತು **08** ರ ಪರ ಶ್ರೀ.ಎ.ಎ.ಜೆ. ವಕೀಲರಿಂದ.

ಮರಿಲಿಂಗಪ್ಪ ನನ್ನ ತಂದೆ. ಅವರು ಮರಣ ಹೊಂದಿ 10 ವರ್ಷಗಳಾಗಿವೆ. ನನ್ನ ತಂದೆ ಮರಿಲಿಂಗಪ್ಪರವರು ದಿ: 20.04.2010 ರಂದು ಮರಣಹೊಂದಿದ್ದಾರೆ ಎಂದರೆ ಸರಿ. ಅವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ನಮ್ಮ ತಂದೆಯವರಿಗೆ ಸಿಂದಗಿಯಲ್ಲಿ ಬೆಲ್ಲದ ಸಗಟು ವ್ಯಾಪಾರ ಇತ್ತು ಎಂದರೆ ಸಾಕ್ಷಿ ಕಿರಾಣಿ ಅಂಗಡಿ ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯವರ ಜೀವಿತಾವಧಿಯಲ್ಲಿ ಸದರಿ ಅಂಗಡಿಯನ್ನು ನನ್ನ ತಂದೆ ಮತ್ತು ಅವರ ಮೂರು ಜನ ಗಂಡು ಮಕ್ಕಳು ಸೇರಿ ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಲೋಡ ಗಟ್ಟಲೇ ಬೆಲ್ಲವನ್ನು ತರಿಸಿ ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. ನಮ್ಮ ತಂದೆ ಮರಲಿಂಗಪ್ಪನವರಿಗೆ ಅವರ ತಂದೆಯಿಂದ ಆಸ್ತಿಗಳು ಬಂದಿದ್ದವು. ಆದರೆ ಎಷ್ಟು ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಅವರ ತಂದೆಯಿಂದ ಎಷ್ಟು ಜಮೀನುಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸಿಂದಗಿಯಲ್ಲಿ ಮನೆ ಇತ್ತು. ಅದು ನನ್ನ ತಂದೆಯ ಹೆಸರಿನಲ್ಲಿ ಇತ್ತು. ಮನೆ ನಂಬರ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಖಾಲಿ ನಿವೇಶನ ಇರಲಿಲ್ಲ. ಸಾಕ್ಷಿ ಮುಂದುವರೆದು ಇದ್ದಿರಬಹುದು, ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಹೇಳಿರುವ ಟಿ.ಎಮ.ಸಿ.ನಂ.226 ಮತ್ತು ಟಿ.ಎಮ್.ಸಿ.ನಂ.228 ಕಟ್ಟಿದ ಮನೆಗಳಾಗಿವೆ. ಅವುಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ಸಿಂದಗಿ ವಾರ್ಡ ನಂ.1 ರಲ್ಲಿ ಇರುವ ಆಸ್ತಿ ನಂ. 2757 ಬಿ /16 ಇದು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಮಾಹಿತಿ ಇಲ್ಲ.

3. ಸಿಂದಗಿಯಲ್ಲಿ ಸರ್ವೆ ನಂ. 737/1, 738/1, 738/1, 737/2, 612 ಜಮೀನುಗಳು ನಮ್ಮ ತಂದೆಯ ಹೆಸರಿನಲ್ಲಿ ಇತ್ತು. ಈ ಎಲ್ಲಾ ಜಮೀನುಗಳು ನನ್ನ ತಂದೆಯವರು ಖರೀದಿಸಿರುವ ಜಮೀನುಗಳು ಎಂದರೆ ಸರಿಯಲ್ಲ. ಈ ಜಮೀನುಗಳು ನಮ್ಮ ತಂದೆಗೆ ಅವರ ತಂದೆಯಿಂದ ಬಂದ ಜಮೀನುಗಳು ಮತ್ತು ಕೆಲವು ನಮ್ಮ ತಂದೆಯವರೇ ಖರೀದಿಸಿರುವ ಜಮೀನುಗಳಾಗಿರುತ್ತವೆ. ಟಿ.ಎಮ್.ಸಿ.ನಂ.226 ಮತ್ತು 228 ಈ ದಾವೆಯನ್ನು ನಾನು ದಾಖಲಿಸುವಾಗ ನನ್ನ ತಂದೆಯ ಹೆಸರಿನಲ್ಲಿ ಇದ್ದವು. ನಾನು ಈ ದಾವೆಯಲ್ಲಿ ಸಿಂದಗಿ ಆಸ್ತಿ ನಂ.2757 ಬಿ/16 ನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿಂದಗಿಯಲ್ಲಿರುವ ಜಮೀನು ಸರ್ವೆನಂ.612 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.612 ನನ್ನ ತಂದೆಯ ಹೆಸರಿನಲ್ಲಿ ಇತ್ತು. ಸರ್ವೆ ನಂ.612 ಸುಮಾರು 20 ವರ್ಷಗಳ ಹಿಂದೆ ಮಾರಾಟ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

4. ಸರ್ವೆ ನಂ. 737/9 ಕ್ಷೇತ್ರ 2 ಎಕರೆ ಜಮೀನು ಮುಸ್ತಫಾ ಮಲೀಕಸಾಬ ಅಸಂತಾಪೂರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನನ್ನು ಸದರಿಯವರಿಗೆ ಯಾರು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮುಸ್ತಫಾ ಮಲಿಕಸಾಬ ಅಸಂತಾಪೂರವರನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನನ್ನಾಗಿ ಮಾಡಬೇಕಿತ್ತು ಎಂದರೆ ಸರಿಯಲ್ಲ. ಮನೆತನದ ವ್ಯವಹಾರವನ್ನು ನನ್ನ ತಂದೆಯವರು ಮರಣ ಹೊಂದುವವರೆಗೆ ಅವರೇ ನೋಡಿಕೊಂಡಿದ್ದರು ಎಂದರೆ ಸರಿ. ನಮ್ಮ ತಂದೆಯವರು ತನ್ನ ಜೀವಾತವಧಿಯಲ್ಲಿ ಅಂದರೆ 2000 ನೇ ಇಸ್ವಿಯಲ್ಲಿ ಅವರು ಗಳಿಸಿದ ದಾವಾ ಆಸ್ತಿಗಳನ್ನು ತನ್ನ ಮೂರು ಜನ ಗಂಡು ಮಕ್ಕಳು ಮತ್ತು ಮೊಮ್ಮಕ್ಕಳು ಮತ್ತು ಸೊಸೆಯಂದಿರಿಗೆ ವಾಟ್ನಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಪಾಲನ್ನು ಪಡೆದವರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ 2000 ನೇ ಇಸ್ವಿಯಿಂದಲೇ ದಾಖಲಾಗಿ ಮುಂದುವರೆದುಕೊಂಡು ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. 2000 ನೇ ಇಸ್ವಿಯಲ್ಲಿ ನನ್ನ ತಂದೆಯವರೇ ವಾಟ್ನಿ ಪತ್ರ ಮಾಡಿ ತನ್ನ ಗಂಡು ಮಕ್ಕಳಿಗೆ, ಮೊಮ್ಮಕ್ಕಳಿಗೆ, ಸೊಸೆಯಂದಿರಿಗೆ ವಾಟ್ನಿ ಮಾಡಿ ಕೊಟ್ಟು ತಹಶೀಲ್ದಾರ ಕಛೇರಿಗೆ ವರದಿಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಆಗಾಗ್ಗ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ಪರಿಶೀಲನೆ ಮಾಡಲಿಲ್ಲ. ವಿಜಯಕುಮಾರವರು ನನ್ನ ದೊಡ್ಡ ಅಣ್ಣ ಬಸವರಾಜ ರವರ ಮಗ. ವಿಜಯಕುಮಾರ ಅಂದರೆ ಪ್ರತಿವಾದಿ ನಂ.3 ರವರು ತನ್ನ ತಂದೆಯಾದ ಬಸವರಾಜರವರ ಪಾಲಿಗೆ ಬಂದಿರುವ ಸಿಂದಗಿ ಜಮೀನನ್ನು ಭೂಪರಿವರ್ತನೆ ಮಾಡಿ ನಿವೇಶನಗಳನ್ನಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿವೇಶನಗಳಾದ ನಂತರ ಪ್ರತಿವಾದಿ ನಂ.3 ರವರು ಸದರಿ ನಿವೇಶನಗಳನ್ನು ಬೇರೆ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2000 ನೇ ಇಸ್ವಿಯಲ್ಲಿ ನಮ್ಮ ತಂದೆಯವರು ಮಾಡಿರುವ ವಾಟ್ನಿಯ ಪ್ರಕಾರ ಡ ನಂ. 2112 ದೃಢೀಕರಣಗೊಂಡು ವಾಟ್ನಿಯಲ್ಲಿ ಪಾಲನ್ನು ಪಡೆದವರ ಹೆಸರುಗಳು ಅವರವರ ಪಾಲಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ.

6. ವಾದ ಪತ್ರವನ್ನು ಬರೆಯಲು ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇನೆ. ದಾವಾ ಆಸ್ತಿಗೆ ಸಂಬಂಧಿಸಿದ ಡ, ಪಾಲು ವಾಟ್ನಿಯಾದ ಬಗ್ಗ ಮ್ಯುಟೇಶನಗಳ ದೃಢೀಕೃತ ಪ್ರತಿಗಳನ್ನು ನಮ್ಮ ವಕೀಲರಿಗೆ ನಾನೇ ತೆಗೆಯಿಸಿಕೊಟ್ಟಿದ್ದೇನೆ. ಸದರಿ ಮ್ಯುಟೇಶನಗಳು ಖೊಟ್ಟಿಯಾಗಿದ್ದು ಅದನ್ನು ರದ್ದುಪಡಿಸಬೇಕೆಂದು ನನ್ನ ದಾವೆಯಲ್ಲಿ ಬರೆಯಿಸಿದ್ದೇನೆ. ದಾವಾ ಆಸ್ತಿಗಳ ಪೈಕಿ ಕೆಲವು ಕ್ಷೇತ್ರವನ್ನು ಲೋಕೋಪಯೋಗಿ ಇಲಾಖೆಯವರು ಭೂಸ್ವಾಧೀನ ಪಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ. ಗಣೇಶ ವಿಠ್ಠಲ ಸಿಂದಗಿ ಮತ್ತು ಶ್ರಿದೇವಿ ವಿಠ್ಠಲರವರ ಪರಿಚಯ ನನಗೆ ಇಲ್ಲ. ಸರ್ವೆ ನಂ.737/6 ರ ಪೈಕಿ 1 ಎಕರೆ ಜಮೀನನನ್ನು ಈ ಇಬ್ಬರಿಗೆ ಯಾರು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.737/5 ಕ್ಷೇತ್ರ 8 ಗುಂಟೆ ಜಮೀನನ್ನು ಈ ಇಬ್ಬರಿಗೆ ಯಾರು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

7. ಗಣೇಶ ಮತ್ತು ಶ್ರೀದೇವಿ ಮತ್ತು ಮುಸ್ತಫಾ ರವರಿಗೆ ಮಾರಾಟ ಮಾಡಿರುವ ಜಮೀನುಗಳು ನನ್ನ ಮೇಲೆ ಬಂಧನಕಾರಿ ಅಲ್ಲ ಎಂದು ಈ ದಾವೆಯಲ್ಲಿ ಬರೆಯಿಸಲಿಲ್ಲ ಸಾಕ್ಷಿ ಮುಂದುವರೆದು ಇವರುಗಳಿಗೆ ಮಾರಾಟ ಆಗಿರುವ ವಿಷಯ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಸರ್ವೆ ನಂ.737/2 ಮತ್ತು 738/2 ನ್ನು ಅದರ ಮೂಲ ಮಾಲೀಕರಾದ ಶಿವನಗೌಡರವರಿಂದ ದಿ: 14.11.1980 ರಂದು ರೂ. 11,000/- ಕ್ಕೆ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಆಗ ತಾನು ಚಿಕ್ಕವಳು ಇದ್ದ ಕಾರಣ ತನಗೆ ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.2 ಮತ್ತು 3 ರವರು ನನ್ನ ಸಹೋದರರ ಬಸವರಾಜರವರ ಹೆಂಡತಿ ಮತ್ತು ಮಗ ಎಂದರೆ ಸರಿ. ದಾವಾ ಆಸ್ತಿ ಸಿಂದಗಿ ಗ್ರಾಮದ ಟಿ.ಎಮ್.ಸಿ.ನಂ.226 ಪ್ರತಿವಾದಿ ನಂ.2 ಮತ್ತು 3 ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

8. ದಾವಾ ಆಸ್ತಿ ಟಿ.ಎಮ್.ಸಿ.ನಂ.228 ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಸಂಪೂರ್ಣ ಮನೆ ಅವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ನನ್ನ ತಾಯಿ. ಸಿಂದಗಿ ವಾರ್ಡ ನಂ.1 ಆಸ್ತಿ ನಂ.2757/ಬಿ/16 ಮೊದಲು ನನ್ನ ತಂದೆಯವರ ಹೆಸರಿನಲ್ಲಿ ಇತ್ತು. ಈ ಆಸ್ತಿಯು ನನ್ನ ತಾಯಿಯವರ ಹೆಸರಿನಲ್ಲಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಈ ದಾವೆ ದಾಖಲಾದ ನಂತರ ಮತ್ತು ದಾವೆ ವಿಚಾರಣೆಗೆ ಬಾಕಿ ಇರುವಾಗ ಆಸ್ತಿ ನಂ.2757 ಬಿ/16 ನ್ನು ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.16 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯವರು ಈ ಆಸ್ತಿಯನ್ನು ಮಾರಾಟ ಮಾಡುವಾಗ ಅವರ ಮಕ್ಕಳ ಒಪ್ಪಿಗೆಯನ್ನು ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 2000 ನೇ ಇಸ್ವಿಯಲ್ಲಿ ಈ ಮೇಲೆ ಹೇಳಿದಂತೆ ವಾಟ್ನಿ ಮಾಡಿದಾಗ ನನ್ನ ತಂದೆಯವರು ಸರ್ವೆ ನಂ.737/2 ಕ್ಷೇತ್ರ 6 ಎಕರೆ 32 ಗುಂಟೆ ಜಮೀನು ಮತ್ತು ಸರ್ವೆ ನಂ. 737/2 ಕ್ಷೇತ್ರ 6 ಎಕರೆ 32 ಗುಂಟೆ ಜಮೀನು ಹೀಗೆ ಎರಡು ಜಮೀನುಗಳು ನನ್ನ ಸಹೋದರನಾದ

ಬಸಪ್ಪ ತಂದೆ ಮರಿಲಿಂಗಪ್ಪ ಪಟ್ಟಣಶೆಟ್ಟಿಯವರ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

**(ನಾಗೇಶ ಕೆ ಮೊಗೇರ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ.